## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 207 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾಗಿದ ದಿನಾಂಕ | : | 09-12-2025 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಜಲಸಿರಿ ಯೋಜನೆ ಯಾವಾಗ ಪ್ರಾರಂಭವಾಯಿತು: ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿಯೆಷ್ಟು: ಹಾಗೂ ಒಟ್ಟು ಯೋಜನಾ ಮೊತ್ತವೆಷ್ಟು: | ಜಲಸಿರಿ ಯೋಜನೆಯು 2014 ರಿಂದ ಪ್ರಾರಂಭವಾಗಿರುತ್ತದೆ. ಯೋಜನೆಯನ್ನು 10 ವರ್ಷಗಳಲ್ಲಿ ಪೂರ್ಣಗೊಳಿಸಲು ನಿಗಧಿಪಡಿಸಲಾಗಿರುತ್ತದೆ. ಜಲಸಿರಿ ಯೋಜನೆಯ ಅಂದಾಜು ಮೊತ್ತ ರೂ. 2584.00 ಕೋಟಿಗಳಾಗಿರುತ್ತದೆ. |
| (ಆ) | ರಾಜ್ಯದ ಎಷ್ಟು ಕಡೆ ಜಲಸಿರಿ ಯೋಜನೆ ಜಾರಿಯಲ್ಲಿದೆ: ಅವುಗಳಲ್ಲಿ ಎಷ್ಟು ಕಡೆ ಪೂರ್ಣಗೊಂಡಿದೆ: ಪೂರ್ಣಗೊಳ್ಳಲು ಬಾಕಿ ಇರುವ ಯೋಜನೆಗಳಾವುವು ಹಾಗೂ ಬಾಕಿ ಇರಲು ಕಾರಣಗಳೇನು: | ರಾಜ್ಯದ ಆಯ್ದ 8 (ಎಂಟು) ನಗರ/ ಪಟ್ಟಣಗಳಾದ ದಾವಣಗೆರೆ, ಹರಿಹರ, ರಾಣೆಬೆನ್ನೂರು, ಬ್ಯಾಡಗಿ, ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರಗಳಲ್ಲಿ ಜಲಸಿರಿ ಯೋಜನೆಯಡಿಯಲ್ಲಿ 28 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಪೂರ್ಣಗೊಂಡಿರುವ 20 ಕಾಮಗಾರಿಗಳು, ಪೂರ್ಣಗೊಳ್ಳಲು ಬಾಕಿ ಇರುವ 8 ಕಾಮಗಾರಿಗಳು ಹಾಗೂ ಬಾಕಿ ಇರಲು ಕಾರಣಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| (ಇ) | ಮಂಗಳೂರಿನಲ್ಲಿ ಈವರೆಗೆ ಕೇವಲ 60% ಮಾತ್ರ ಪೂರ್ಣಗೊಂಡಿದ್ದು ಇನ್ನುಳಿದ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾದ ಹೆಚ್ಚುವರಿ ಅವಧಿ ಎಷ್ಟು: | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಲಸಿರಿ ಯೋಜನೆಯಡಿ ಒಟ್ಟು 11 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಅವುಗಳಲ್ಲಿ 7 ಕಾಮಗಾರಿಗಳು ಪೂರ್ಣಗೊಂಡಿವೆ.<br><br>ಬಾಕಿ ಇರುವ ನಾಲ್ಕು (4) ಕಾಮಗಾರಿಗಳಲ್ಲಿ ಎರಡು (2) ಒಳಚರಂಡಿ ಕಾಮಗಾರಿಗಳನ್ನು ದಿನಾಂಕ:31.12.2025 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿರುತ್ತದೆ. ಉಳಿದ ಎರಡು (2) ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾದ ಹೆಚ್ಚುವರಿ ಅವಧಿ ವಿವರ ಈ ಕೆಳಕಂಡಂತಿದೆ.<br><br>1. 24/7 ಕುಡಿಯುವ ನೀರು ಸರಬರಾಜು ಕಾಮಗಾರಿಯ ದಿನಾಂಕ:23.11.2025 ರವರೆಗೆ ಇದ್ದು, ಅವಧಿಯನ್ನು ಈ ಕೆಳಗಿನ ಕಾರಣಗಳಿಂದ ವಿಸ್ತರಿಸಬೇಕಾಗಿರುತ್ತದೆ.<br><br>• ಸರ್ಕಾರದ ಆದೇಶ ಸಂಖ್ಯೆ: ನಅಇ 159 ಪಿಆರ್‌ಜೆ 2023 ದಿನಾಂಕ:02.01.2024 ರಲ್ಲಿ ಅನುಮೋದನೆ ನೀಡಿರುವಂತೆ ಹೊಸ 125 ಎಂಎಲ್‌ಡಿ ಸಾಮರ್ಥ್ಯದ ನೀರು ಶುದ್ಧೀಕರಣ ಘಟಕವನ್ನು ಹೆಚ್ಚುವರಿಯಾಗಿ |

Scanned with OKEN Scanner

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ನಿರ್ಮಿಸಲಾಗುತ್ತಿರುವುದರಿಂದ ಅವಧಿಯನ್ನು ವಿಸ್ತರಿಸಬೇಕಿರುತ್ತದೆ.<br>• ಜಿಲ್ಲಾಡಳಿತದ ನಿರ್ದೇಶನದಂತೆ ಮಳೆಗಾಲದಲ್ಲಿ (3 ತಿಂಗಳು) ರಸ್ತೆ ಹಗೆಯಲು ಅವಕಾಶವಿರುವುದಿಲ್ಲ ಇದರಿಂದ ಕಾಮಗಾರಿ ವಿಳಂಭವಾಗಿರುತ್ತದೆ.<br>• ರಾಷ್ಟ್ರೀಯ ಹೆದ್ದಾರಿ ಹಾಗೂ ರೈಲ್ವೇ ಇಲಾಖೆಯ ರಸ್ತೆಗಳಲ್ಲಿ ಕೊಳವೆ ಅಳವಡಿಸಲು ಅನುಮತಿಯು ವಿಳಂಭ.<br>• 125 ಎಂ.ಎಲ್.ಡಿ ನೀರು ಶುದ್ಧೀಕರಣ ಘಟಕವನ್ನು ಪೂರ್ಣಗೊಳಿಸಲು ದಿನಾಂಕ 31.12.2026 ವರೆಗೆ ಕಾಲಾವಕಾಶ ಬೇಕಾಗಿರುತ್ತದೆ ಮತ್ತು ಉಳಿದ ಕಾಮಗಾರಿಗಳನ್ನು ಜೂನ್-2026 ಪೂರ್ಣಗೊಳಿಸಲು ಕಾಲಾವಕಾಶ ಬೇಕಾಗಿದ್ದು, ಹೆಚ್ಚುವರಿ ಕಾಲಾವಧಿಯ ವಿಸ್ತರಣೆಗೆ Extra Financial Implication Committee ಮುಂದೆ ಮಂಡಿಸಿ ಅನುಮೋದನೆ ಪಡೆದು ಮುಂದಿನ ಕ್ರಮವಹಿಸಲಾಗುವುದು.<br>2. 125 ಎಂಎಲ್ ಡಿ ಸಾಮರ್ಥ್ಯದ ಜಾಕ್ ವೆಲ್ ಕಾಮಗಾರಿಗೆ ಕಾರ್ಯಾದೇಶವನ್ನು ದಿನಾಂಕ:11.11.2025 ರಂದು ನೀಡಲಾಗಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು 18 ತಿಂಗಳ ಕಾಲಾವಕಾಶವನ್ನು ನಿಗಧಿ ಮಾಡಲಾಗಿದ್ದು, ದಿನಾಂಕ:11.05.2027ಕ್ಕೆ ಪೂರ್ಣಗೊಳ್ಳುವುದು. |
| (ಈ) | ಜಲಸಿರಿ ಯೋಜನೆಯ ಕಾಮಗಾರಿಗಳಿಗಾಗಿ ಅಗೆದ ಸಾರ್ವಜನಿಕ ರಸ್ತೆಗಳನ್ನು ದುರಸ್ತಿಗೊಳಿಸಲಾಗುತ್ತಿದೆಯೇ: ಯಾವ ಕಾಲಮಿತಿಯೊಳಗೆ ದುರಸ್ತಿಗೆ ಕ್ರಮ ವಹಿಸಲಾಗುವುದು: | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಲಸಿರಿ ಯೋಜನೆಯಡಿ ಕಾಮಗಾರಿಗಳಿಗಾಗಿ ಅಗೆದ ಸಾರ್ವಜನಿಕ ರಸ್ತೆಗಳನ್ನು ಕೊಳವೆ ಅಳವಡಿಸಿದ ತಕ್ಷಣ refilling ಮಾಡಿ ಸಂಚಾರಕ್ಕೆ ಮುಕ್ತಗೊಳಿಸಲಾಗುತ್ತಿದೆ.<br>ಅಗೆದ ಭಾಗದಲ್ಲಿ ಪೂರ್ಣ compaction ಆದ ನಂತರ ಸುಮಾರು 3 ತಿಂಗಳ ಒಳಗೆ ರಸ್ತೆಯನ್ನು ಮೂಲ ಸ್ಥಿತಿಗೆ ಪುನಶ್ಚೇತನಗೊಳಿಸಲಾಗುತ್ತಿದ್ದು, ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| (ಉ) | ಹೀಗೆ ಹೆಚ್ಚುವರಿ ಅವಧಿ ಬೇಕಾದ ಪ್ರಕರಣಗಳಲ್ಲಿ ಸದರಿ ಯೋಜನೆಯ ಯೋಜನಾ ವೆಚ್ಚ ಎಷ್ಟು ಪ್ರತಿಶತ ಹೆಚ್ಚಾಗುವ ನಿರೀಕ್ಷೆ ಇದೆ ಮತ್ತು ಅದನ್ನು ಹೇಗೆ ಭರಿಸಲಾಗುವುದು? | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಲಸಿರಿ ಯೋಜನೆಯಡಿ ಬಾಕಿ ಉಳಿದಿರುವ ಕಾಮಗಾರಿಗಳಿಗೆ ಹೆಚ್ಚುವರಿ ಅವಧಿ ನೀಡಲಾಗಿದ್ದರೂ ಸಹ ಯೋಜನಾ ವೆಚ್ಚದಲ್ಲಿ ಹೆಚ್ಚುವರಿ ಆಗುವುದಿಲ್ಲ. ಅನುಮೋದನೆಗೊಂಡಿರುವ ಗುತ್ತಿಗೆ ಮೊತ್ತ ರೂ.617.22 ವೆಚ್ಚದಲ್ಲಿಯೇ ಪೂರ್ಣಗೊಳಿಸಲಾಗುವುದು. |

Scanned with OKEN Scanner

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಸ್ಥಳೀಯ ಸಂಸ್ಥೆಯಿಂದ ಸ್ಥಳ ನೀಡುವಲ್ಲಿ ವಿಳಂಬ ಹಾಗೂ ಇತರೆ ಇಲಾಖೆಗಳಿಂದ ಪರವಾನಗಿ/ ಅನುಮೋದನೆ ಪಡೆಯುವಲ್ಲಿ ವಿಳಂಬವಾದ ಅವಧಿಗೆ ಮಾತ್ರ ಗುತ್ತಿಗೆ ಅನುಸಾರ Price Adjustment ನೀಡಲಾಗುತ್ತಿದೆ. ಈಗಾಗಲೇ ವಿಸ್ತರಿಸಲಾದ ಕಾಲಾವಧಿಯಲ್ಲಿ (ದಿನಾಂಕ:24.05.2023 ರಿಂದ 23.11.2025) ಶೇ 2.03 ರಷ್ಟು Price Adjustment ರೂ.12.53 ಕೋಟಿ ಮೊತ್ತ ಪಾವತಿಸಬೇಕಾಗಿದೆ.<br><br>ಮುಂದಿನ ಒಂದು ವರ್ಷದ ಅವಧಿಗೆ ಶೇ.1.29 ರಷ್ಟು Price Adjustment ರೂ.8.00 ಕೋಟಿಗಳನ್ನು ಪಾವತಿಸಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ.<br><br>ಸದರಿ ಮೊತ್ತವನ್ನು (ರೂ.12.53+8.00=20.53 ಕೋಟಿಗಳು ಶೇ 3.32ರಷ್ಟು) ಕ್ವಿಮಿಪ್ ಅನುಮೋದಿತ ಯೋಜನಾ ಸರ್ಕಾರಿ ಆದೇಶದಲ್ಲಿ ಸಮಾಲೋಚಕ ಸಂಸ್ಥೆಗಳು, ಭೂ ಸ್ವಾಧೀನ ಹಾಗೂ ಇತರೆ ಶೀರ್ಷಿಕೆ ಅಡಿಯಲ್ಲಿ ಮೀಸಲಿರಿಸಲಾಗಿರುವ ಮೊತ್ತದಲ್ಲಿ ಭರಿಸಲಾಗುತ್ತಿದೆ. |

ಕಡತ ಸಂಖ್ಯೆ:ನಅಇ 201 ಪಿಆರ್‌ಜೆ 2025

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

Scanned with OKEN Scanner

ಅನುಬಂಧ-1: ಜಲಸಿರಿ ಯೋಜನೆಯಲ್ಲಿ ಪೂರ್ಣಗೊಂಡಿರುವ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ

ಕ್ವಿಮಿಪ್ (ಜಲಸಿರಿ) ಯೋಜನೆಯಡಿಯಲ್ಲಿ ರಾಜ್ಯದ ಆಯ್ದ 8 (ಎಂಟು) ನಗರ/ಪಟ್ಟಣಗಳಾದ ದಾವಣಗೆರೆ, ಹರಿಹರ, ರಾಣೆಬೆನ್ನೂರು, ಬ್ಯಾಡಗಿ, ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರಗಳಲ್ಲಿ 28 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅದರಲ್ಲಿ 20 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 8 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಪೂರ್ಣಗೊಂಡಿರುವ ಕಾಮಗಾರಿಗಳ(20) ವಿವರ:

1. ದಾವಣಗೆರೆ ಒಳಚರಂಡಿ ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): **108.43**
    - ಕಾಮಗಾರಿ ಪೂರ್ಣಗೊಂಡ ದಿನಾಂಕ: **28.02.2022**
2. ದಾವಣಗೆರೆ (20 MLD and 5 MLD) ತಾಜ್ಯ ನೀರು ಸಂಸ್ಕರಣಾ ಘಟಕ
    - ಗುತ್ತಿಗೆ ಮೊತ್ತ (ರೂ ಕೋಟಿ): **85.47**
    - ಕಾಮಗಾರಿ ಪೂರ್ಣಗೊಂಡ ದಿನಾಂಕ: **31.10.2024**
3. ದಾವಣಗೆರೆ ಸಗಟು ನೀರು ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): **85.47**
    - ಕಾಮಗಾರಿ ಪೂರ್ಣಗೊಂಡ ದಿನಾಂಕ: **31.10.2024**
4. ಹರಿಹರ ನಗರದ ಒಳಚರಂಡಿ ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): **66.73**
    - ಕಾಮಗಾರಿ ಪೂರ್ಣಗೊಂಡ ದಿನಾಂಕ: **31.08.2020**
5. ಹರಿಹರ ನಗರದ ಸಗಟು ನೀರು ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): **27.03**
    - ಕಾಮಗಾರಿ ಪೂರ್ಣಗೊಂಡ ದಿನಾಂಕ: **31.08.2020**
6. ಹರಿಹರ ನಗರದ 24/7 ನೀರು ಸರಬರಾಜು ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): **50.12**
    - ಕಾಮಗಾರಿ ಪೂರ್ಣಗೊಂಡ ದಿನಾಂಕ: **30.06.2022**
7. ರಾಣೆಬೆನ್ನೂರು ನಗರದ 24/7 ನೀರು ಸರಬರಾಜು ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): **127.11**

- ಕಾಮಗಾರಿ ಪೂರ್ಣಗೊಂಡ ದಿನಾಂಕ: **30.06.2022**

8. ರಾಣೆಬೆನ್ನೂರು ನಗರದ ಗಂಗಾಜಲ ಕೆರೆ ಪುನಶ್ಚೇತನ ಕಾಮಗಾರಿ
   - ಗುತ್ತಿಗೆ ಮೊತ್ತ (ರೂ ಕೋಟಿ): 29.83
   - ಕಾಮಗಾರಿ ಪೂರ್ಣಗೊಂಡ ದಿನಾಂಕ: **31.03.2022**
9. ಬ್ಯಾಡಗಿ ಪಟ್ಟಣದ ಒಳಚರಂಡಿ ಕಾಮಗಾರಿ
   - ಗುತ್ತಿಗೆ ಮೊತ್ತ (ರೂ ಕೋಟಿ): 63.42
   - ಕಾಮಗಾರಿ ಪೂರ್ಣಗೊಂಡ ದಿನಾಂಕ: **15.03.2022**

10. ಬ್ಯಾಡಗಿ ಪಟ್ಟಣದ ಸಗಟು ನೀರು ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): 6.32
    - ಕಾಮಗಾರಿ ಪೂರ್ಣಗೊಂಡ ದಿನಾಂಕ: **17.11.2018**

11. ಬ್ಯಾಡಗಿ ಪಟ್ಟಣದ 24/7 ನೀರು ಸರಬರಾಜು ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): 25.67
    - ಕಾಮಗಾರಿ ಪೂರ್ಣಗೊಂಡ ದಿನಾಂಕ: **01.09.2024** ರಿಂದ ಪ್ರಾಯೋಗಿಕ ಕಾರ್ಯಾಚರಣೆ ಪ್ರಗತಿಯಲ್ಲಿದೆ.

12. ಮಂಗಳೂರು ನಗರದ ಸಗಟು ನೀರು ಸರಬರಾಜು ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): 35.29
    - ಕಾಮಗಾರಿ ಪೂರ್ಣಗೊಂಡ ದಿನಾಂಕ: **31.03.2024**

13. ಮಂಗಳೂರು ನಗರದ ಹಾಲಿ ಒಳಚರಂಡಿ ಪಂಪಿಂಗ್ ಮೈನ್ ಪೈಪಲೈನ್ ಬದಲಿ ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): 84.56
    - ಕಾಮಗಾರಿ ಪೂರ್ಣಗೊಂಡ ದಿನಾಂಕ: **27.07.2021**

14. ಮಂಗಳೂರು ನಗರದ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ ವಲಯ)3&5)
    - ಗುತ್ತಿಗೆ ಮೊತ್ತ (ರೂ ಕೋಟಿ): 22.40
    - ಕಾಮಗಾರಿ ಪೂರ್ಣಗೊಂಡ ದಿನಾಂಕ: **30.06.2024**

15. ಮಂಗಳೂರು ನಗರದ ವಲಯ 9,12&13 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು
    - ಗುತ್ತಿಗೆ ಮೊತ್ತ (ರೂ ಕೋಟಿ): 23.59
    - ಕಾಮಗಾರಿ ಪೂರ್ಣಗೊಂಡ ದಿನಾಂಕ: **30.09.2024**

16. ಮಂಗಳೂರು ನಗರದ ಸುರತ್ಕಲ್ ಒಳಚರಂಡಿ ವ್ಯವಸ್ಥೆಯ ಪುನಃಶ್ಚೇತನ ಮತ್ತು ಮಿಸ್ಸಿಂಗ್ ಲಿಂಕ್‌ಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು.
    - ಗುತ್ತಿಗೆ ಮೊತ್ತ (ರೂ ಕೋಟಿ): ರ 77.59
    - ಕಾಮಗಾರಿ ಪೂರ್ಣಗೊಂಡ ದಿನಾಂಕ: 31.03.2023

17. ಮಂಗಳೂರು ನಗರದ ವಲಯ 3 & 5 ರ uncovered area ದಲ್ಲಿ ಒಳಚರಂಡಿ ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): 19.05
    - ಕಾಮಗಾರಿ ಪೂರ್ಣಗೊಂಡ ದಿನಾಂಕ: 31.03.2025

18. ಮಂಗಳೂರು ನಗರದ ವಲಯ 5 ರ MSEZ R & R colony ದಲ್ಲಿ ಒಳಚರಂಡಿ ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): 15.63
    - ಕಾಮಗಾರಿ ಪೂರ್ಣಗೊಂಡ ದಿನಾಂಕ: 15.08.2025

19. ಕುಂದಾಪುರ ಪಟ್ಟಣದ 24/7 ನೀರು ಸರಬರಾಜು ಕಾಮಗಾರ
    - ಗುತ್ತಿಗೆ ಮೊತ್ತ (ರೂ ಕೋಟಿ): 27.75
    - ಕಾಮಗಾರಿ ಪೂರ್ಣಗೊಂಡ ದಿನಾಂಕ: 29.02.2024

20. ಪುತ್ತೂರು ನಗರದ 24/7 ನೀರು ಸರಬರಾಜು ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): 76.98
    - ಕಾಮಗಾರಿ ಪೂರ್ಣಗೊಂಡ ದಿನಾಂಕ: 31.03.2024

ಪ್ರಗತಿಯಲ್ಲಿರುವ ಕಾಮಗಾರಿಗಳ (8) ವಿವರ

1. ದಾವಣಗೆರೆ 24/7 ನೀರು ಸರಬರಾಜು ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): 451.16
    - ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಿರುವ ದಿನಾಂಕ: 31.03.2026
    - ವಿಳಂಭಕ್ಕೆ ಕಾರಣಗಳು
        - ➢ ಕೋವಿಡ್ ನಿಂದಾಗಿ ಕಾಮಗಾರಿ ಸ್ಥಗಿತ
        - ➢ ರಾಷ್ಟ್ರೀಯ ಹೆದ್ದಾರಿ ಹಾಗೂ ರೈಲ್ವೇ ಇಲಾಖೆಯ ರಸ್ತೆಗಳಲ್ಲಿ ಕೊಳವೆ ಅಳವಡಿಸಲು ಅನುಮತಿಯು ವಿಳಂಬ
        - ➢ ಬೆಸ್ಕಾಂ ಇಲಾಖೆಯಿಂದ ಅನುಮತಿ ವಿಳಂಭ

2. ಮಂಗಳೂರು ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ ವಲಯ)1,4 &7
    - ಗುತ್ತಿಗೆ ಮೊತ್ತ (ರೂ ಕೋಟಿ): 30.59

- ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಿರುವ ದಿನಾಂಕ: 31.12.2025
- ವಿಳಂಭಕ್ಕೆ ಕಾರಣಗಳು
  - ➢ ಖಾಸಗಿ ಜಮೀನಿನಲ್ಲಿ ಕೊಳವೆ ಅಳವಡಿಸಲು ಅನುಮತಿ ವಿಳಂಬ.
  - ➢ ರೈಲ್ವೇ ಇಲಾಖೆಯ ಅನುಮತಿ.
  - ➢ ಹೆಚ್ಚಿನ ಅಂತರ್ಜಲ್ ಮಟ್ಟ
  - ➢ ಸಾರ್ವಜನಿಕರ ಅಕ್ಷೇಪಣೆ.
  - ➢ ಸಾರ್ವಜನಿಕ ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಕಾಮಗಾರಿಗೆ ಅಡಚಣೆ
  - ➢ 50 ವರ್ಷದ ಹಳೆಯ ಕೊಳವೆ ಜಾಲದ ಬದಲಾವಣೆ ಕಾಮಗಾರಿಯನ್ನು ತ್ಯಾಜ್ಯ ಹರಿಯುವಿಕೆಯ ಸಂದರ್ಭ ದಲ್ಲಿ ಮಾಡಬೇಕಾದರಿಂದ ವಿಳಂಬ
  - ➢ ಕಲ್ಲು ಬಂಡೆಗಳು ಬಂದ್ದಿದರಿಂದ ಬ್ಲಾಸ್ಟಿಂಗ್ ಅನುಮತಿ ಇಲ್ಲದೇ ವಿಳಂಬ
  - ➢ ವಿಸ್ತರಿಸಿದ ಮಳೆಗಾಲ

3. ಮಂಗಳೂರು ನಗರದ ಹಾಲಿ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ ವಲಯ)7
   - ಗುತ್ತಿಗೆ ಮೊತ್ತ (ರೂ ಕೋಟಿ): 22.65
   - ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಿರುವ ದಿನಾಂಕ: 31.12.2025
   - ವಿಳಂಭಕ್ಕೆ ಕಾರಣಗಳು
     - ➢ ಖಾಸಗಿ ಜಮೀನಿನಲ್ಲಿ ಕೊಳವೆ ಅಳವಡಿಸಲು ಅನುಮತಿ ವಿಳಂಬ.
     - ➢ ರೈಲ್ವೇ ಇಲಾಖೆಯ ಅನುಮತಿ.
     - ➢ ಹೆಚ್ಚಿನ ಅಂತರ್ಜಲ್ ಮಟ್ಟ
     - ➢ ಸಾರ್ವಜನಿಕರ ಅಕ್ಷೇಪಣೆ.
     - ➢ ಸಾರ್ವಜನಿಕ ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಕಾಮಗಾರಿಗೆ ಅಡಚಣೆ
     - ➢ 50 ವರ್ಷದ ಹಳೆಯ ಕೊಳವೆ ಜಾಲದ ಬದಲಾವಣೆ ಕಾಮಗಾರಿಯನ್ನು ತ್ಯಾಜ್ಯ ಹರಿಯುವಿಕೆಯ ಸಂದರ್ಭ ದಲ್ಲಿ ಮಾಡಬೇಕಾದರಿಂದ ವಿಳಂಬ
     - ➢ ವಿಸ್ತರಿಸಿದ ಮಳೆಗಾಲ

4. ಮಂಗಳೂರು 24x7 ಕುಡಿಯುವ ನೀರು ಸರಬರಾಜು ಕಾಮಗಾರಿ
   - ಗುತ್ತಿಗೆ ಮೊತ್ತ (ರೂ ಕೋಟಿ): 617.22
   - ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಿರುವ ದಿನಾಂಕ: 31.12.2026
   - ವಿಳಂಭಕ್ಕೆ ಕಾರಣಗಳು
     - ➢ ಕೋವಿಡ್ ನಿಂದಾಗಿ ಕಾಮಗಾರಿ ಸ್ಥಗಿತ.
     - ➢ ರಾಷ್ಟ್ರೀಯ ಹೆದ್ದಾರಿ ಹಾಗೂ ರೈಲ್ವೇ ಇಲಾಖೆಯ ರಸ್ತೆಗಳಲ್ಲಿ ಕೊಳವೆ ಅಳವಡಿಸಲು ಅನುಮತಿಯು ವಿಳಂಬ.

- ➢ ಪಣಂಬೂರು, ನೆಹರೂ ಮೈದಾನ ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಾಣಕ್ಕೆ ಬೇಕಾದ ಜಾಗವನ್ನು ನವ ಮಂಗಳೂರು ಬಂದರು ಪ್ರಾಧಿಕಾರ (NMPA) ಮತ್ತು ಮಹಾನಗರ ಪಾಲಿಕೆಯಿಂದ ಹಸ್ತಾಂತರಿಸುವಲ್ಲಿ ವಿಳಂಬ.
- ➢ ಹೋಲಿಹಿಲ್ ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಾಣಕ್ಕೆ ಬೇಕಾಗಿರುವ ಜಾಗವನ್ನು ಅಂತಿಮಗೊಂಡಿರುವುದಿಲ್ಲ..
- ➢ ಮಂಗಳೂರು ತಾಲೂಕಿನ ಅಡ್ಯಾರ್ ಗ್ರಾಮದಲ್ಲಿ 125MLD ಸಾಮರ್ಥ್ಯದ ನೀರು ಶುದ್ಧೀಕರಣ ಘಟಕ (WTP) ನಿರ್ಮಾಣಹೆಚ್ಚುವರಿ ಕಾಮಗಾರಿಗೆ ದಿನಾಂಕ: 02.01.2024 ರ ಸರ್ಕಾರದ ಆದೇಶದಲ್ಲಿ ಅನುಮೊದನೆ ನೀಡಲಾಗಿರುತ್ತದೆ.

5. ಮಂಗಳೂರು ಅಡ್ಯಾರ್ ಬಳಿ 125 MLD ಜಾಕ್ ವೆಲ್ ಮತ್ತು ನೇತ್ರಾವತಿಗೆ 125 MLD WTP ಸ್ಥಳಕ್ಕೆ ತಡೆಗೋಡೆ ನಿರ್ಮಾಣ
   - ಗುತ್ತಿಗೆ ಮೊತ್ತ (ರೂ ಕೋಟಿ): 20.01
   - ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಿರುವ ದಿನಾಂಕ: 11.11.2025 ರಂದು ಕಾಮಗಾರಿಯ ಗುತ್ತಿಗೆಯ ಕರಾರು ಆಗಿರುತ್ತದೆ. ಕಾಮಗಾರಿಯನ್ನು ಪೂರ್ಣಗೊಳಿಸಲು 18 ತಿಂಗಳ ಕಾಲಾವಕಾಶವನ್ನು ನಿಗಧಿಪಡಿಸಲಾಗಿದೆ.

6. ಉಡುಪಿ ವರಾಹಿ ನದಿ ಮೂಲದಿಂದ ಸಗಟು ನೀರು ಸರಬರಾಜು ಕಾಮಗಾರಿ
   - ಗುತ್ತಿಗೆ ಮೊತ್ತ (ರೂ ಕೋಟಿ): 116.54
   - ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಿರುವ ದಿನಾಂಕ: 30.06.2026
   - ವಿಳಂಭಕ್ಕೆ ಕಾರಣಗಳು
     - ➢ ಕೋವಿಡ್ ನಿಂದಾಗಿ ಕಾಮಗಾರಿ ಸ್ಥಗಿತ
     - ➢ ಅರಣ್ಯ ಇಲಾಖೆಯಿಂದ ಅನುಮತಿ ವಿಳಂಭ.
     - ➢ ಕ.ನೀ.ನಿಗಮದಿಂದ ಜಾಕ್ ವೆಲ್ ಹಸ್ತಾಂತರ ವಿಳಂಭ
     - ➢ ವಿಸ್ತರಿಸಿದ ಮಳೆಗಾಲ

7. ಉಡುಪಿ 24/7 ನೀರು ಸರಬರಾಜು ಕಾಮಗಾರಿ
   - ಗುತ್ತಿಗೆ ಮೊತ್ತ (ರೂ ಕೋಟಿ): 106.92
   - ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಿರುವ ದಿನಾಂಕ: 15.07.2025
   - ವಿಳಂಭಕ್ಕೆ ಕಾರಣಗಳು
     - ➢ ಕೋವಿಡ್ ನಿಂದಾಗಿ ಕಾಮಗಾರಿ ಸ್ಥಗಿತ.
     - ➢ ರಾಷ್ಟ್ರೀಯ ಹೆದ್ದಾರಿ ಹಾಗೂ ರೈಲ್ವೇ ಇಲಾಖೆಯ ರಸ್ತೆಗಳಲ್ಲಿ ಕೊಳವೆ ಅಳವಡಿಸಲು ಅನುಮತಿಯು ವಿಳಂಬ.
     - ➢ ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಾಣಕ್ಕೆ ಬೇಕಾದ ಜಾಗವನ್ನು ನವ ಹಸ್ತಾಂತರಿಸುವಲ್ಲಿ ವಿಳಂಬ

- ➢ ಸಾರ್ವಜನಿಕ ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಕಾಮಗಾರಿಗೆ ಅಡಚಣೆ.
- ➢ ವಿಸ್ತರಿಸಿದ ಮಳೆಗಾಲ.

8. ಉಡುಪಿ ಸಗಟು ನೀರು ಸರಬರಾಜು ಕಾಮಗಾರಿ
    - ಗುತ್ತಿಗೆ ಮೊತ್ತ (ರೂ ಕೋಟಿ): 50.80
    - ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಿರುವ ದಿನಾಂಕ: 31.12.2025
    - ವಿಳಂಭಕ್ಕೆ ಕಾರಣಗಳು
        - ➢ ಕೋವಿಡ್ ನಿಂದಾಗಿ ಕಾಮಗಾರಿ ಸ್ಥಗಿತ.
        - ➢ ಖಾಸಗಿ ಜಮೀನಿನ ಮಾಲೀಕರಿಂದ ಅಡಚಣೆ
        - ➢ ಮೆಸ್ಕಾಂ ಇಲಾಖೆಯಿಂದ ಅನುಮತಿ ವಿಳಂಭ.
        - ➢ ವಿಸ್ತರಿಸಿದ ಮಳೆಗಾಲ.

ಅನುಬಂಧ-2 ಜಲಸಿರಿ ಯೋಜನೆಯಡಿ ಕೊಳವೆ ಅಳವಡಿಕೆಗೆ ಅಗೆದ ರಸ್ತೆಗಳ ಪುನಶ್ಚೇತನ ವಿವರಗಳು

| ಕ್ರ.ಸಂ | ರಸ್ತೆ ವಿವರ | ದಿನಾಂಕ 26.11.2025 ವರೆಗೆ ಪೂರ್ಣಗೊಂಡ ಪ್ರಮಾಣ (ಕಿ.ಮೀ ನಲ್ಲಿ) | ಬಾಕಿ ಇರುವ ಪ್ರಮಾಣ (ಕಿ.ಮೀ ನಲ್ಲಿ) | ಪೂರ್ಣಗೊಳಿಸಲು ಉದ್ದೇಶಿಸಿರುವ ಅವಧಿ |
|---|---|---|---|---|
| 1 | ಕಾಂಕ್ರೀಟ್ ರಸ್ತೆ | 32.843 | 5.00 | ಅಗೆದ ಭಾಗದಲ್ಲಿ ಪೂರ್ಣ compaction ಆದ ನಂತರ ಸುಮಾರು 3 ತಿಂಗಳ ಒಳಗೆ ರಸ್ತೆಯನ್ನು ಮೂಲ ಸ್ಥಿತಿಗೆ ಪುನಶ್ಚೇತನಗೊಳಿಸಲಾಗುತ್ತಿದೆ |
| 2 | ಡಾಂಬರು ರಸ್ತೆ | 16.147 | 1.50 | |
| 3 | ಪೇವರ್ ರಸ್ತೆ | 38.147 | | |
| 4 | BS Slab, WMM | 7.667 | | |
| 5 | Interlock | | 0.50 | |
| | ಒಟ್ಟು: | **94.804** | **7.00** | |